ಬೆಂವಿವಿಯಲ್ಲಿ ದೇವರಾಜು ಅರಸು ಸ್ಮರಣೆ

ಕ್ರಾಂತಿಕಾರಿ ನಿರ್ಧಾರಗಳಿಂದ ದಮನಿತರಿಗೆ ಬದುಕು ರೂಪಿಸಿದ ಅರಸು

ಬೆಂಗಳೂರು: ಸತ್ಯದ ಪರ ಹೋರಾಡುವವರಿಗೆ ವಿರೋಧವೇ ಹೆಚ್ಚು ಎಂಬುದಕ್ಕೆ ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸು ಉದಾಹರಣೆ ಎಂದು ಸಾಹಿತಿ ಎಸ್.ಜಿ.ಸಿದ್ಧರಾಮಯ್ಯ ಹೇಳಿದ್ದಾರೆ.

ಬೆಂಗಳೂರು ವಿವಿಯ ಹಿಂದುಳಿದ ವರ್ಗಗಳ ಕೋಶದ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಡಿ.ದೇವರಾಜು ಅರಸು: ಯುವ ಸ್ಪಂದನೆ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಅರಸು ಅವರು ಎಂದಿಗೂ ಮನೆತನದ ಸೋಂಕಿಗೆ ಒಳಗಾಗದೆ ಶ್ರಮಿಕ, ಕೃಷಿ ವಾತಾವಾರಣಕ್ಕೆ ಒಳಗಾಗಿ ದುರ್ಬಲ, ಶೋಷಿತ ವರ್ಗಕ್ಕೆ ಶಕ್ತಿ ಕೊಟ್ಟಿದ್ದಾರೆ. ದೇಶದ ಚರಿತ್ರೆ,ಸಂವಿಧಾನ, ಸಾಮಾಜಿಕ ಸಂರಚನೆ ಬಗ್ಗೆ ಸುಧೀರ್ಘವಾಗಿ ಅಧ್ಯಯನ ಮಾಡಿದ್ದ ಮಹಾ ಓದುಗರಾಗಿದ್ದರು. ಜಾತಿ ರಾಜಕಾರಣ ಹೊರತುಪಡಿಸಿ ಶಕ್ತಿ ರಾಜಕಾರಣ ಸೃಷ್ಟಿ ಮಾಡಿದ್ದರು. ಶೋಷಿತರ ಕಷ್ಟಗಳನ್ನು ಅರಿತು ಕ್ರಾಂತಿಕಾರಿ ನಿರ್ಧಾರಗಳ ಮೂಲಕ ದಮನಿತರಿಗೆ ಬದುಕು ಕಟ್ಟಿಕೊಟ್ಟರು. ಆದರೆ, ರಾಜಕೀಯವಾಗಿ ಅವರಿಗೆ ದೊಡ್ಡ ವಿರೋಧಿ ಬಣ ಸೃಷ್ಟಿಯಾಗಿತ್ತು. ಸತ್ಯದ ಪರ ಹೋರಾಡಿದವರಿಗೆ ವಿರೋಧವೇ ಹೆಚ್ಚು ಎಂಬುದಕ್ಕೆ ಅರಸು ಉದಾಹರಣೆ. ಆ ಎಲ್ಲಾ ವಿರೋಧದ ನಡುವೆಯೂ ಅವರು ತೆಗೆದುಕೊಂಡು ನಿರ್ಧಾರಗಳು ಶತಮಾನಗಳೇ ಸ್ಮರಿಸುವಂತದ್ದು ಎಂದು ನೆನೆದರು.

18 ಕ್ಕೂ ಹೆಚ್ಚು ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಸಂಶೋಧಕರು, ವಿದ್ಯಾರ್ಥಿಗಳು ಭಾಗವಹಿಸಿ ಡಿ.ದೇವರಾಜು ಅರಸು ಕುರಿತಾದ ಪ್ರಬಂಧ ಗಳನ್ನು ಮಂಡಿಸಿದರು. ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ ಡಾ.ನಲ್ಲಿಕುಂಟೆ ವೆಂಕಟೇಶಯ್ಯ, ಕುಲಪತಿ ಡಾ.ಜಯಕರ ಎಸ್.ಎಂ., ಕುಲಸಚಿವ ಶೇಕ್ ಲತೀಫ್, ಹಿಂದುಳಿದ ವರ್ಗಗಳ ಕೋಶದ ವಿಶೇಷಾಧಿಕಾರಿ ಮತ್ತು ಪುಸ್ತಕದ ಸಂಪಾದಕ ಪ್ರೊ.ಡಿ.ಕೆ.ಚಿತ್ತಯ್ಯ ಪೂಜಾರ್ ಇದ್ದರು.

ವಿಚಾರ ಸಂಕಿರಣ ಮತ್ತು ಡಿ.ದೇವರಾಜು ಅರಸು ಯುವ ಸ್ಪಂದನೆ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಸಾಹಿತಿ ಎಸ್.ಜಿ.ಸಿದ್ಧರಾಮಯ್ಯ, ಕೊಪ್ಪಳ ವಿವಿ ಕುಲಪತಿ ಬಿ.ಕೆ.ರವಿ, ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ ಡಾ.ನಲ್ಲಿಕುಂಟೆ ವೆಂಕಟೇಶಯ್ಯ, ಕುಲಪತಿ ಡಾ.ಜಯಕರ ಎಸ್.ಎಂ. ಮತ್ತಿತರರು ಇದ್ದರು.

ಕಾಮಗಾರಿ ಪ್ರಗತಿಗೆ ಜೈಕಾ ಸಂಸ್ಥೆ ಪ್ರಶಂಸೆ

ಕುಡಿಯುವ ನೀರು ಕಲ್ಪಿಸುವ ಕಾವೇರಿ ಐದನೇ ಹಂತದ ಯೋಜನೆ

ಬೆಂಗಳೂರು: ನಗರ ಹೊರವಲಯದ 110 ಹಳ್ಳಿಗಳಿಗೆ ಕಾವೇರಿ ಕುಡಿಯುವ ನೀರು ಸರಬರಾಜು ಮಾಡುವ ಕಾವೇರಿ ಐದನೇ ಹಂತದ ಕಾಮಗಾರಿ ಪ್ರಗತಿಗೆ ಅಂತಾರಾಷ್ಟ್ರೀಯ ಸಂಸ್ಥೆ ಜೈಕಾ ಪ್ರಶಂಸೆ ವ್ಯಕ್ತಪಡಿಸಿದ್ದು, ಜೈಕಾ ಸೂಚನೆಯಂತೆ ಮೇ ಒಳಗಾಗಿ ಯೋಜನೆ ಕಾರ್ಯಗತಗೊಳಿಸಬೇಕು ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್ ಪ್ರಸಾತ್ ಮನೋಹರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ತಲಘಟ್ಟಪುರದ ಸಿಪಿ 8 ಯೋಜನೆ, ತಾತಗುಣಿ, ಎಪಿಎಸ್ ಕಾಲೇಜು ಮುಂಭಾಗ ಹಾಗೂ ನೆಟ್ಟಿಗೆರೆ ಪೈಪ್ ಲೈನ್ ಪ್ರದೇಶಗಳಲ್ಲಿ ನಡೆಯುತ್ತಿರುವ ಕಾವೇರಿ ಐದನೇ ಹಂತದ ಕಾಮಗಾರಿಯ ಪ್ರಗತಿ ಪರಿಶೀಲನೆ ನಡೆಸಿದ ಬಳಿಕ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿ, ಕೋವಿಡ್ ಸಾಂಕ್ರಾಮಿಕ ಹಾಗೂ ಅಕಾಲಿಕ ಮಳೆಯಿಂದ ವಿಳಂಬಗೊಂಡಿದ್ದ ಕಾಮಗಾರಿಯನ್ನು ಚುರುಕುಗೊಳಿಸಿ ಪ್ರಗತಿ ಸಾಧಿಸಲಾಗಿದೆ ಎಂದು ಹೇಳಿದರು.

ಮಾ.5 ಮತ್ತು 6 ರಂದು ನಗರಕ್ಕೆ ಭೇಟಿ ನೀಡಿದ್ದ ಜೈಕಾ ಇಂಡಿಯಾ ಸಂಸ್ಥೆಯ ಪ್ರತಿನಿಧಿಗಳಾದ ಹಾರುಕಾ ಕೋಯಾಮಾ ಮತ್ತು ಜೈಕಾ ಇಂಡಿಯಾದ ಡೆವಲಪ್‌ಮೆಂಟ್ ತಜ್ಞ ಶಿವಾನಿ ಚೌಹಾನ್ ಕಾಮಗಾರಿಯ ಪ್ರಗತಿ ಪರಿಶೀಲಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಅದರಲ್ಲೂ ಬೆಂಗಳೂರಿನ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ನೀರಿನ ತೊಂದರೆಯನ್ನು ನಿವಾರಿಸಲು ಅನುಸರಿಸುತ್ತಿರುವ ಕ್ರಮಗಳ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಅಲ್ಲದೆ, ಕಾಮಗಾರಿಗಳಲ್ಲಿ ಇದೇ ರೀತಿಯ ವೇಗ ಮತ್ತು ಪ್ರಗತಿಯನ್ನು ಕಾಪಾಡಿಕೊಳ್ಳುವಂತೆ ಸೂಚನೆ ನೀಡಿದರು. ಅದರಂತೆ ಕಾಮಗಾರಿ ತ್ವರಿತಗೊಳಿಸಿ ಯೋಜನೆ ಕಾರ್ಯಗತಗೊಳಿಸಬೇಕು ಎಂದು ತಿಳಿಸಿದರು.

ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಅವರು ಕಾವೇರಿ 5ನೇ ಹಂತದ ಕಾಮಗಾರಿ ಪರಿಶೀಲಿಸಿದರು. ಮಂಡಳಿ ಅಧಿಕಾರಿಗಳು ಇದ್ದರು.

ಸಮಾಚಾರ ಸಣ್ಣದಲ್ಲ

ಇಂದು ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲಮಂಡಳಿಯು ಮಾ.28ರ ಬೆಳಗ್ಗೆ 9.30ರಿಂದ 11.00 ಗಂಟೆಯ ವರೆಗೆ ನೀರಿನ ಅದಾಲತ್‌ನ್ನು ಆಯೋಜಿಸಲಾಗುವುದು ಎಂದು ಮಂಡಳಿ ತಿಳಿಸಿದೆ. ನಗರದ (ಆಗ್ನೇಯ-3), (ಆಗ್ನೇಯ-6), (ಪಶ್ಚಿಮ-1-3), (ವಾಯುವ್ಯ-5), (ಉತ್ತರ-2-3), (ದಕ್ಷಿಣ-1-3),(ನೈರುತ್ಯ-3),(ನೈರುತ್ಯ-6) ಮತ್ತು (ಪೂರ್ವ-2-4) ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳನ್ನು ಸಾರ್ವಜನಿಕರು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಹಾಗೂ ವಾಟ್ಸ್ ಆಪ್ ನಂಬರ್ 87622 28888 ಸಂದೇಶ ಕಳುಹಿಸುವ ಮೂಲಕ ದೂರು ದಾಖಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಹಾರಾಷ್ಟ್ರ ಸಹ ಪ್ರಭಾರಿ ಸುರಾನ

ಬೆಂಗಳೂರು: ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ ಹಲವು ರಾಜ್ಯಗಳಿಗೆ ಬಿಜೆಪಿ ಚುನಾವಣಾ ಪ್ರಭಾರಿ ಮತ್ತು ಸಹ ಪ್ರಭಾರಿಗಳನ್ನು ನೇಮಕ ಮಾಡಿದ್ದು, ರಾಜ್ಯ ಬಿಜೆಪಿ ಮಾಜಿ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನ ಅವರನ್ನು ಮಹಾರಾಷ್ಟ್ರ ರಾಜ್ಯಕ್ಕೆ ಚುನಾವಣಾ ಸಹ ಪ್ರಭಾರಿಯಾಗಿ ನೇಮಕ ಮಾಡಲಾಗಿದೆ. ಬುಧವಾರ ಮಹಾರಾಷ್ಟ್ರ, ಉತ್ತರ ಪ್ರದೇಶ, ತೆಲಂಗಾಣ, ದೆಹಲಿ ಸೇರಿದಂತೆ 13 ರಾಜ್ಯಗಳಿಗೆ ಚುನಾವಣಾ ಪ್ರಭಾರಿ ಮತ್ತು ಸಹ ಪ್ರಭಾರಿಗಳನ್ನು ನೇಮಕ ಮಾಡಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಆದೇಶ ಹೊರಡಿಸಿದ್ದು, ಈ ಪೈಕಿ ನಿರ್ಮಲ್ ಕುಮಾರ್ ಸುರಾನ ಅವರನ್ನು ಮಹರಾಷ್ಟದ ಸಹ ಪ್ರಭಾರಿಯಾಗಿ ನೇಮಿಸಲಾಗಿದೆ.

ನಿತ್ಯಾ ರಮೇಶ್ ನೃತ್ಯಾರ್ಪಣೆ 30ಕ್ಕೆ

ಬೆಂಗಳೂರು: ನಗರದ ವಯ್ಯಾಲಿಕಾವಲ್‌ನಲ್ಲಿರುವ ಚೌಡಯ್ಯ ಸ್ಮಾರಕ ಭವನದಲ್ಲಿ ಶನಿವಾರ (ಮಾ.30) ಸಂಜೆ 5.45 ಗಂಟೆಗೆ ಸಪ್ತಸ್ವರ ಆರ್ಟ್ಸ್ ಕ್ರಿಯೇಷನ್ಸ್ ನೃತ್ಯ ಸಂಸ್ಥೆಯ ನಿತ್ಯಾ ರಮೇಶ್ ನಿತ್ಯಾರ್ಪಣೆಯನ್ನು ಮಾಡಲಿದ್ದಾರೆ. ಹಿರಿಯ ನಾಟ್ಯಗುರು ವಿದುಷಿ. ಮಂಜುಳಾ ಪರಮೇಶ್ ಶಿಷ್ಯೆ ನಿತ್ಯಾ ರಮೇಶ್ ಒಡಿಸ್ಸಿ ಮತ್ತು ಭರತನಾಟ್ಯ ಎರಡೂ ನೃತ್ಯ ಶೈಲಿಗಳಲ್ಲಿ ಕಳೆದ 17 ವರ್ಷಗಳಿಂದ ತರಬೇತಿ ಪಡೆಯುತ್ತಿದ್ದು, ನಾಡಿನಾದ್ಯಂತ ಅನೇಕ ವೇದಿಕೆಗಳ ಮೇಲೆ ನೃತ್ಯ ಪ್ರದರ್ಶನ ನೀಡಿದ್ದಾಳೆ. ನಿತ್ಯಾ ರಮೇಶ್ ಛಾಯಾ ರಮೇಶ್ ಮತ್ತು ರಮೇಶ್ ಕುಮಾರ್ ಪುತ್ರಿ.



29, 31ರಂದು ಬೆಸ್ಕಾಂ ಕ್ಯಾಶ್‌ಕೌಂಟರ್ ಇದೆ

ಬೆಂಗಳೂರು: ವಿದ್ಯುತ್ ಬಿಲ್ ಪಾವತಿಸಲು ಗ್ರಾಹಕರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಬೆಸ್ಕಾಂ ವ್ಯಾಪ್ತಿಯ ಎಲ್ಲಾ ಉಪವಿಭಾಗಗಳ ಕ್ಯಾಷ್ ಕೌಂಟರ್‌ಗಳನ್ನು ಸಾರ್ವತ್ರಿಕ ರಜಾ ದಿನಗಳಾದ ಮಾ.29 ಹಾಗೂ ಮಾ.31ರಂದು ತೆರೆಯಲು ನಿರ್ಧರಿಸಲಾಗಿದೆ ಎಂದು ಬೆಸ್ಕಾಂ ತಿಳಿಸಿದೆ. ಇಂಧನ ಇಲಾಖೆಯ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಉನ್ನತೀಕರಣದ ಸಲುವಾಗಿ ಮಾರ್ಚ್ 10 ರಿಂದ 19ರವರೆಗೆ ಆನ್ ಲೈನ್ ವಿದ್ಯುತ್ ಸೇವೆಗಳು ಸ್ಥಗಿತಗೊಂಡಿದ್ದವು. ಈಅವಧಿಯಲ್ಲಿ ಗ್ರಾಹಕರಿಗೆ ವಿದ್ಯುತ್ ಬಿಲ್ ಪಾವತಿ ಸಾಧ್ಯವಾಗಿರಲಿಲ್ಲ. ಹಾಗೆಯೇ ತಂತ್ರಾಂಶ ಕಾರ್ಯಾರಂಭಗೊಂಡ ಬಳಿಕ ಸರ್ವರ್ ಓವರ್ ಲೋಡ್ ಆಗಿ ಆನ್‌ಲೈನ್ ವಿದ್ಯುತ್ ಸಂಬಂಧಿ ಸೇವೆಗಳು ವ್ಯತ್ಯಯವಾಗಿತ್ತು. ತಂತ್ರಾಂಶ ಉನ್ನತೀಕರಣದ ಹಿನ್ನೆಲೆ ಗ್ರಾಹಕರು ಸಕಾಲದಲ್ಲಿ ವಿದ್ಯುತ್ ಪಾವತಿ ಸಾಧ್ಯವಾಗಿರಲಿಲ್ಲ. ಈ ಹಿನ್ನೆಲೆ ಮಾ.29 ಹಾಗೂ 31ರಂದು ಬೆಸ್ಕಾಂ ನ ಎಲ್ಲಾ ಉಪ ವಿಭಾಗಗಳ ಕ್ಯಾಶ್ ಕೌಂಟರ್‌ಗಳು ಕಾರ್ಯನಿರ್ವಹಿಸಲಿದೆ. ವಿದ್ಯುತ್ ಬಿಲ್ ಪಾವತಿಸಲು ಸಾಧ್ಯವಾಗದೇ ವಿಳಂಬವಾದವರಿಗೆ ಬಿಲ್ ಪಾವತಿಗೆ ಯಾವುದೇ ದಂಡ ಅಥವಾ ಬಡ್ಡಿ ವಿಧಿಸಲಾಗುವುದಿಲ್ಲ ಎಂದು ಬೆಸ್ಕಾಂ ತಿಳಿಸಿದೆ.

ಆನಂದದ ಆಲೂ
ವಿವಾಹ್
ಪ್ರತಿ ಬುಧವಾರ

ಬಂದಿದೆ ಬೇಕಾದ ಕಡೆ ಹೋಗುವ ಐಚ್ಛಿಕ ಪ್ರವಾಸ

ಪ್ರವಾಸಗಳು ಈಗ ಪ್ರಯಾಸವಾಗದು | ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಹೊಸ ಪ್ರಯೋಗ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ಈಗ ಮಕ್ಕಳ ಪರೀಕ್ಷೆ ಮುಗಿದಿರುವ ಅನೇಕ ಮನೆಗಳಲ್ಲಿ ಪ್ರವಾಸದ ಪ್ಲಾನ್ ಮಾಡುವ ಸಮಯ ಶುರುವಾಗಿದೆ.

ಆದರಲ್ಲೂ ಪ್ರೌಢಶಾಲೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳ ಕೆಲವೇ ದಿನಗಳಲ್ಲಿ ಮುಗಿಯಲಿದ್ದು, ಅಂಥ ಮನೆಗಳಲ್ಲಂತೂ ಬೇಸಿಗೆ ರಜೆಯ ಪ್ರವಾಸದ ಚರ್ಚೆಗಳೇ ನಡೆಯುತ್ತಿರುತ್ತವೆ. ಇಂಥವರಿಗೆಂದೇ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಪ್ರವಾಸಗಳ ಅನೇಕ ಹೊಸ ಪ್ರಯೋಗಗಳನ್ನೇ ನಡೆಸುತ್ತಿದೆ. ಅಂದರೆ ಗ್ರಾಮೀಣ ಮತ್ತು ನಗರ ಪ್ರದೇಶ ಹಾಗೂ ಉಳ್ಳವರು, ಇಲ್ಲದವರು ಹಾಗೂ ಮಧ್ಯಮ ವರ್ಗದವರು ಎಲ್ಲರನ್ನೂ ಗಮನದಲ್ಲಿಟ್ಟುಕೊಂಡು ಅನೇಕ ಪ್ರವಾಸದ ಪ್ಯಾಕೇಜ್ ಗಳನ್ನು ಸಿದ್ಧಗೊಳಿಸಿದೆ.

ಅದರಲ್ಲೂ ವಿಶೇಷವಾಗಿ ಇದೇ ಪ್ರಥಮ ಬಾರಿಗೆ ಐಚ್ಛಿಕ ಪ್ರವಾಸ (customize tour packages) ಕಸ್ಟಮೈಸ್ ಪ್ರವಾಸ ಸೌಲಭ್ಯ ಆರಂಭಿಸಿದೆ. ಈ ಮೂಲಕ ಪ್ರವಾಸಿಗರಿಗೆ ಬೇಕಾದ ಸ್ಥಳಗಳಿಗೆ, ಅವರಿಗೆ ಅನುಕೂಲವಾದ ಸಮಯಕ್ಕೆ ಹಾಗೂ ಅಗತ್ಯವಾದ ವಾಹನದ ಮೂಲಕ ಕೇಳಿದ ಅವಧಿಗೆ ಪ್ರವಾಸಗಳನ್ನು ಕಲ್ಪಿಸಿಕೊಡಲಾಗುತ್ತಿದೆ. ಅಂದರೆ ಸದ್ಯ ಚಾಲ್ತಿಯಲ್ಲಿರುವ ಪ್ರವಾಸ ಪ್ಯಾಕೇಜ್ ಗಳಲ್ಲಿ ಪ್ರಯಾಣ, ವಾಹನ, ವೀಕ್ಷಣೆ, ವಾಸ್ತವ್ಯ ಎಲ್ಲದಕ್ಕೂ ಅವಧಿಗಳು ನಿಗದಿಯಾಗಿರುತ್ತದೆ. ಇಲ್ಲಿ ಎಲ್ಲಾ ಪ್ರಯಾಣಿಕರ ಸ್ವತಂತ್ರಕ್ಕೆ ತಕ್ಕಂತೆ ಇರುತ್ತದೆ ಎಂದು ಹೇಳಲಾಗದು. ಇಂಥ ಪ್ರವಾಸಗಳನ್ನು ಇಚ್ಛಿಸದೆ ಖಾಸಗಿಯಾಗಿ ಪ್ರವಾಸ ಹೋಗುವವರನ್ನು ಗಮನದಲ್ಲಿಟ್ಟುಕೊಂಡು ಈಗ ಐಚ್ಛಿಕ ಪ್ರವಾಸ ಪ್ಯಾಕೇಜ್ ಕಲ್ಪಿಸಾಗಿದೆ. ಈಗಷ್ಟೇ ಆರಂಭವಾರುವ ಈ ಸೌಲಭ್ಯದಲ್ಲಿ ಸ್ತ್ರೀ ಸಂಘಟನೆಗಳು, ಕಾರ್ಪೊರೇಟ್ ಸಂಸ್ಥೆಗಳು, ನಿವೃತ್ತ ಅಧಿಕಾರಿಗಳು, ಐಎಎಸ್ ಅಧಿಕಾರಿಗಳು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ.

ಹಾಗೆ ನೋಡಿದರೆ ಈ ಸೌಲಭ್ಯ ಖಾಸಗಿ ಟೂರ್ ಏಜೆನ್ಸಿಗಳಲ್ಲಿ ಈಗಾಲೇ ಲಭ್ಯವಿದೆ. ಆದರೂ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಲ್ಲಿ ಏಕೆ ಬೇಡಿಕೆ ಬರುತ್ತದೆ ಎಂದರೆ, ಇದು ತಮಗೆ ಬೇಕಾದ ಜಾಗಕ್ಕೆ, ಬೇಕಾದ ಸಮಯಕ್ಕೆ ಪ್ರವಾಸ ಹೊರಟರೂ ಪ್ಯಾಕೇಜ್ ದರ ಮಾತ್ರ ಕೈಗೆಟುಕುವಂತಿರುತ್ತದೆ.

ಇದೆಲ್ಲಕ್ಕಿಂತ ಮುಖ್ಯವಾಗಿ ಪ್ರಯಾಣದ ಆರಂಭದಿಂದ ಅತ್ಯಂತ ವರೆಗೂ ಸೂಕ್ತ ಮಾರ್ಗದರ್ಶನ ಹಾಗೂ ಸುರಕ್ಷತೆಗೆ ಪರಮ ಆದ್ಯತೆ ಇರುತ್ತದೆ. ಹಾಗೆಯೇ ಊಟ, ಉಪಚಾರ, ವಾಸ್ತವ್ಯ ಹಾಗೂ ಆರೋಗ್ಯದಲ್ಲಿ ಏನೇ ಏರುಪೇರಾದರೂ ತಕ್ಷಣದ ಸ್ಪಂದನೆ ಪ್ರಮಾಣಕರೀಸಿದ ಚಾಲಕ, ವಾಹನ ಮತ್ತು ಮಾರ್ಗದರ್ಶಿ ಇರುತ್ತಾರೆ.

ಹಾಗೆಯೇ ತೊಂದರೆಯಾದರೆ ಪರ್ಯಾಯ ವ್ಯವಸ್ಥೆಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸಲಾಗಿದೆ. ಆದರೆ ಇಷ್ಟೆಲ್ಲಾ ಸೌಲಭ್ಯಗಳು ಖಾಸಗಿಯಲ್ಲಿ ಸಿಗುವ ಸಾಧ್ಯತೆ ಇರುವುದಿಲ್ಲ. ಹೀಗಾಗಿ ಬಹುತೇಕ ಪ್ರವಾಸ ಪ್ರೇಮಿಗಳು ಖಾಸಗಿ ಏಜೆನ್ಸಿಗಳ ಬದಲು ನಿಗಮದ ಐಚ್ಛಿಕ ಪ್ಯಾಕೇಜ್ ಗೆ ಹೆಚ್ಚು ಆಸಕ್ತಿ ತೋರಿಸುತ್ತಿದ್ದಾರೆ ಎಂದು ನಿಗಮದ ಅಧಿಕಾರಿಗಳು ಹೇಳಿದ್ದಾರೆ.

ಪ್ರವಾಸಿಗರ ಅನುಕೂಲ ಮತ್ತು ಇಚ್ಛೆಗೆ ತಕ್ಕಂತೆ ಪ್ರವಾಸ ಸೌಲಭ್ಯ ಕಲ್ಪಿಸುವುದನ್ನು ಪ್ರಥಮ ಬಾರಿಗೆ ಪ್ರಯೋಗಿಸುತ್ತಿದ್ದೇವೆ. ಇದರಿಂದ ನಿಗಮಕ್ಕೆ ಮತ್ತು ಪ್ರವಾಸಿಗರಿಗೆ ಅನುಕೂಲವಾಗಲಿದೆ.
-ಜಿ.ಜಗದೀಶ್, ವ್ಯವಸ್ಥಾಪಕ ನಿರ್ದೇಶಕ

ಇವೆಲ್ಲಾ ವಿಶೇಷ ಪ್ಯಾಕೇಜ್‌ಗಳು

ನಿಗಮದ ಈಗ ಕಾಲಕ್ಕೆ ತಕ್ಕಂತೆ ಅನೇಕ ವಿಶೇಷ ಪ್ಯಾಕೇಜ್ ಗಳನ್ನು ಪರಿಚಯಿಸಲಾಗಿದೆ. ಬಾದಾಮಿ, ಐಹೊಳೆ, ಪಟ್ಟದ ಕಲ್ಲು ಸೇರಿದಂತೆ ಅನೇಕ ಸ್ಥಳಗಳನ್ನು ಪರಿಚಯಿಸುವ ಪಾರಂಪರಿಕ ಪ್ರವಾಸ, ಕುಕ್ಕೆಸುಬ್ರಮಣ್ಯ, ಕೊಲ್ಲೂರು, ಉಡುಪಿ ಸೇರಿದಂತಹ ಯಾತ್ರಾಸ್ಥಳ ಪ್ರವಾಸ, ನಿಸರ್ಗ ಸವಿಸುವ ನಾಗರಹೊಳೆ, ಮಡಿಕೇರಿ, ದಾಂಡೇಲಿ, ಅಣಸಿ, ಕೋಡೆ ಕ್ಯಾನಲ್, ಊಟಿ ಸೇರಿದಂತೆ ನಿಸರ್ಗ ಪ್ರವಾಸ ಸೌಲಭ್ಯವಿದೆ. ಇದೇರೀತಿ ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳ ಪ್ರವಾಸ, ಗೋಕರ್ಣ, ಮಂಗಳೂರು ಸೇರಿದಂತೆ ಅನೇಕ ಬೀಚ್ ಪ್ರವಾಸಗಳು. ಹೀಗೆ ಎಲ್ಲಾ ವಿಭಾಗಗಳಲ್ಲೂ ಪ್ರವಾಸ ಕೈಗೊಳ್ಳುವ ಸುಮಾರು 40 ಪ್ರತ್ಯೇಕ ಪ್ಯಾಕೇಜ್ ಗಳನ್ನು ಕಲ್ಪಿಸಲಾಗಿದೆ. ಹಾಗೆಯೇ ಗೋವಾ, ಚೆನ್ನೈ, ಹೈದರಾಬಾದ್, ಪಾಂಡಿಚೇರಿ ಸೇರಿದಂತೆ ಹೊರ ರಾಜ್ಯಗಳ ಪ್ರವಾಸವೂ ಇದೆ. ಜತೆಗೆ ವಿದ್ಯಾರ್ಥಿಗಳಿಗೆಂದೇ ಕರ್ನಾಟಕ ದರ್ಶನ ಎಂಬ ಶೈಕ್ಷಣಿಕ ಪ್ರವಾಸ ಸೌಲಭ್ಯವೂ ಲಭ್ಯವಿದೆ.

ಸ್ಥಳೀಯ ಉದ್ಯಮಗಳಿಗೂ ಉತ್ತೇಜನ

ನಿಗಮದ ಪ್ರವಾಸಿಗರನ್ನು ಉತ್ತಮ ಗುಣಮಟ್ಟದ ಹೋಟೆಲ್‌ಗಳಲ್ಲಿ ತಂಗುವಂತೆ ಮಾಡಲಾಗುತ್ತಿದ್ದು, ಸಾಧ್ಯವಾದಷ್ಟು ನಿಗಮದ ಹೋಟೆಲ್‌ಗಳನ್ನೇ ಬಳಸಿಕೊಳ್ಳಲಾಗುತ್ತದೆ. ಒಂದೊಮ್ಮೆ ಪ್ರವಾಸಿಗರು ಒಪ್ಪಿಕೊಳ್ಳದಿದ್ದರೆ, ಅವರು ಹೇಳಿದ ಖಾಸಗಿ ಹೋಟೆಲ್‌ಗಳು ಸಾಧ್ಯವಾದಷ್ಟು ಊರಿನ ಹೊರಗಿರುವ ಹೊಸ ಹೋಟೆಲ್ ಗಳಿಗೆ ಆದ್ಯತೆ ನೀಡಲಾಗುತ್ತಿದೆ. ಅಂದರೆ ಹೋಟೆಲ್‌ಆರಂಭಿಸಲು ಪ್ರವಾಸೋದ್ಯಮ ಇಲಾಖೆಯಿಂದ ಶೇ.25ರಷ್ಟು ಸಬ್ಸಿಡಿ ನೀಡುತ್ತಿದ್ದು, ಈ ಸೌಲಭ್ಯ ಪಡೆದು ನಿರ್ಮಿಸಿದ ಹೋಟೆಲ್ ಗಳಿಗೆ ಆದ್ಯತೆ ನೀಡಲಾಗುತ್ತದೆ. ಈ ಮೂಲಕ ಪ್ರವಾಸೋದ್ಯಮದ ಮೂಲಕ ಈಗ ಸ್ಥಳೀಯ ಉದ್ಯೋಗ ಮತ್ತು ಉದ್ಯಮಕ್ಕೂ ಉತ್ತೇಜನ ನೀಡಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ನೀರಿನ ಅಭಾವ ಎದುರಾಗದಂತೆ ಗಮನಹರಿಸಿ

ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಸಭೆ | ಅಧಿಕಾರಿಗಳಿಗೆ ತುಷಾರ್ ಗಿರಿನಾಥ್ ಸೂಚನೆ

ಬೆಂಗಳೂರು: ಬಿಬಿಎಂಪಿಗೆ ಸೇರಿರುವ 110 ಹಳ್ಳಿಗಳ ಪೈಕಿ ಮಹದೇವಪುರ ವಲಯ ವ್ಯಾಪ್ತಿಗೆ 42 ಹಳ್ಳಿಗಳು ಬರಲಿದ್ದು, ಎಲ್